# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 133 (139) |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ |
| ಉತ್ತರಿಸಬೇಕಾದ ದಿನಾಂಕ | : | 05.12.2023 |
| ಉತ್ತರಿಸಬೇಕಾದ ಸಚಿವರು | : | ನಗರಾಭಿವೃದ್ಧಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಬರುವ ಪಾಲಿಕೆಗಳ, ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಈ ಮಾರುಕಟ್ಟೆಗಳಲ್ಲಿ ಹರಾಜು ಮಾಡಿರುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಹರಾಜಿಗೆ ಬಾಕಿಯಿರುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಈ ಮಾರುಕಟ್ಟೆಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ ಎಷ್ಟು; ಎಲ್ಲಾ ವಿವರಗಳ ಸಹಿತ ಪಾಲಿಕೆವಾರು ಮಾಹಿತಿ ನೀಡುವುದು; | ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ವಿವಿಧ ಕಾರಣಗಳಿಗಾಗಿ ಅರ್ಧಕ್ಕೆ ಸ್ಥಗಿತವಾಗಿರುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ನ್ಯಾಯಾಲಯ ಪ್ರಕರಣಗಳಿಂದಾಗಿ ಬಾಕಿಯಾಗಿರುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಮಾರುಕಟ್ಟೆ ಸ್ಥಗಿತವಾಗಿರುವ ಕಾರಣವೇನು; ವಿವರಗಳನ್ನು ನೀಡುವುದು; | ಬೆಳಗಾವಿ ಮಹಾನಗರ ಪಾಲಿಕೆಗೆ ಸಂಬಂಧಿಸಿದಂತೆ ಅರ್ಧಕ್ಕೆ ಸ್ಥಗಿತವಾಗಿರುವ ಮಾರುಕಟ್ಟೆಗಳ ಸಂಖ್ಯೆ: 140 ಸದರಿ ಅಂಗಡಿಗಳು ಶಿಥಿಲಾವಸ್ಥೆಯಲ್ಲಿದ್ದು, ಹರಾಜು ಮಾಡಲು ಯೋಗ್ಯವಿರುವುದಿಲ್ಲ. ನ್ಯಾಯಾಲಯದಲ್ಲಿ 03 ಪ್ರಕರಣಗಳು ಬಾಕಿ ಇರುತ್ತವೆ. ಒಂದು ಪ್ರಕರಣದಲ್ಲಿ 59 ಸ್ಟಾಲ್ ಗಳು ಹಾಗೂ ಇನ್ನೆರಡು ಪ್ರಕರಣಗಳಲ್ಲಿ 02 ಅಂಗಡಿಗಳಿಗೆ ಸಂಬಂಧಿಸಿದಂತೆ ಪ್ರಕರಣಗಳು ಬಾಕಿ ಇರುತ್ತವೆ. ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ 18 ಅಂಗಡಿಗಳ ಹಿಂದಿನ 06 ತಿಂಗಳವರೆಗೆ ಮುಂದುವರೆಸಿ ನಂತರ ಹರಾಜುಜರುಗಿಸಲು ಆದೇಶಿಸಲಾಗಿದೆ.<br><br>ಮಂಗಳೂರು ಮಹಾನಗರ ಪಾಲಿಕೆಯ ಸೂರತ್ಕಲ್ ಹೊಸ ಮಾರುಕಟ್ಟೆ ಕಾಮಗಾರಿ ಸ್ಥಗಿತಗೊಂಡಿದೆ. ಸದರಿ ಮಾರುಕಟ್ಟೆಯ ಕಾಮಗಾರಿ ಭಾಗ-2ರ ರೂ.65.24 ಕೋಟಿಗಳ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲಾಗುತ್ತಿದೆ. ಇನ್ನುಳಿದಂತೆ ಯಾವುದೇ ಮಹಾನಗರ ಪಾಲಿಕೆಗಳಲ್ಲಿ ಇಂತಹ ಪ್ರಕರಣಗಳಿಲ್ಲ. |
| ಇ) | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇವರು ಪಾಲಿಕೆಗಳ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಎಷ್ಟು ಮಾರುಕಟ್ಟೆಗಳು ಪೂರ್ಣಗೊಂಡಿವೆ; ಸದರಿ ಮಾರುಕಟ್ಟೆಗಳ ನಿರ್ಮಾಣ ಕಾಮಗಾರಿ ಯಾವಾಗ ಪ್ರಾರಂಭಗೊಂಡಿದೆ; ಎಷ್ಟು ಮಾರುಕಟ್ಟೆಗಳು ಪೂರ್ಣಗೊಂಡಿವೆ; (ವಿವರ ನೀಡುವುದು) | ಮಂಗಳೂರು ಮಹಾನಗರಪಾಲಿಕೆ ಅಧೀನದಲ್ಲಿ 26 ಮಾರುಕಟ್ಟೆಗಳಿರುತ್ತದೆ.<br><br>02 ನವೀಕೃತ ಮಾರುಕಟ್ಟೆಗಳು ಪೂರ್ಣಗೊಂಡಿವೆ.<br><br>1) ಕದ್ರಿ ಮಾರುಕಟ್ಟೆ: ದಿನಾಂಕ 05-03-2019 ರಂದು ಪ್ರಾರಂಭಗೊಂಡಿರುತ್ತದೆ.<br>2) ಅಳಕೆ ಮಾರುಕಟ್ಟೆ: ನಿರ್ಮಾಣ ಕಾಮಗಾರಿಯು 2018 ರಲ್ಲಿ ಪ್ರಾರಂಭಗೊಂಡಿದ್ದು, 2020 ರಲ್ಲಿ ಪೂರ್ಣಗೊಂಡಿರುತ್ತದೆ. ಹರಾಜು ಪ್ರಕ್ರಿಯೆ ಪೂರ್ಣಗೊಂಡಿದ್ದು, ಖಾಲಿ ಇರುವ ಮಳಿಗೆಗಳ ಹರಾಜು ಪ್ರಕ್ರಿಯೆ ಪ್ರಗತಿಯಲ್ಲಿದೆ.<br>3) ಸುರತ್ಕಲ್ ಮಾರುಕಟ್ಟೆ ಸಂಕೀರ್ಣ ಕಟ್ಟಡದ ನಿರ್ಮಾಣ ಕಾಮಗಾರಿಯು ಟೆಂಡರ ಆಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. |

| | | |
|---|---|---|
| ಈ) | ಮಂಗಳೂರು ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಿಸಿದ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಪೂರ್ಣಗೊಂಡ ಮಾರುಕಟ್ಟೆಗಳು ಎಷ್ಟು; ವೆಚ್ಚ ಮಾಡಿದ ಮೊತ್ತವೆಷ್ಟು; (ವಿವರ ನೀಡುವುದು) | ಮಂಗಳೂರು ನಗರದಲ್ಲಿ ಸ್ಮಾರ್ಟ್ ಸಿಟಿ ಯೋಜನೆಯಡಿ ಕೇಂದ್ರ ಮಾರುಕಟ್ಟೆಯ ನಿರ್ಮಾಣ ಪ್ರಗತಿಯಲ್ಲಿದೆ. ಈ ಕಾಮಗಾರಿಯು PPP ಮಾದರಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. |
| ಉ) | ಮಂಗಳೂರು ಮಹಾನಗರ ಪಾಲಿಕೆಯಲ್ಲಿ ಈಗಾಗಲೇ ಇರುವ ಹಾಗೂ ಹೊಸ ಮಾರುಕಟ್ಟೆಗಾಗಿ ಖರ್ಚು ಮಾಡಿರುವ ಮೊತ್ತ ಎಷ್ಟು; (ಮಾರುಕಟ್ಟೆವಾರು ವಿವರ ನೀಡುವುದು) | • ಮ.ನ.ಪಾ ವ್ಯಾಪ್ತಿಯಲ್ಲಿ ಸುರತ್ಕಲ್ ಮಾರುಕಟ್ಟೆ ಸಂಕೀರ್ಣ ಕಟ್ಟಡದ ನಿರ್ಮಾಣ ಕಾಮಗಾರಿ (ಬಾಕಿ ಇರುವ ಕಾಮಗಾರಿ) ಭಾಗ-2 ಅಂದಾಜು ಮೊತ್ತ ರೂ. 65.24 ಕೋಟಿ ಸದ್ರಿ ಕಾಮಗಾರಿಯು ಟೆಂಡರ ಆಗಿದ್ದು ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ.<br>• ಮ.ನ.ಪಾ ವ್ಯಾಪ್ತಿಯ ವಿ.ನಂ. 5 ಕಾಟಿಪಳ್ಳ 6ನೇ ಬ್ಲಾಕ್ ಕೃಷ್ಣಾಪುರ ಮಾರುಕಟ್ಟೆ ಕಟ್ಟಡದ ಬಲಭಾಗದ ತಳ ಅಂತಸ್ತು ಮತ್ತು ನೆಲ ಅಂತಸ್ತಿನ ಉಳಿಕೆ ಕಾಮಗಾರಿ ಅಂದಾಜು ಮೊತ್ತ ರೂ.1,50,00,000/- ಕಾಮಗಾರಿ ಪ್ರಗತಿಯಲ್ಲಿರುತ್ತದೆ.<br>• ರೂ. 1230/- ಲಕ್ಷ ಮೊತ್ತದ ವೆಚ್ಚದಲ್ಲಿ ಕದ್ರಿ ಮಾರುಕಟ್ಟೆಯು ನಿರ್ಮಾಣ ಗೊಂಡಿದ್ದು, ಹರಾಜು ಪ್ರಕ್ರಿಯೆ ಪ್ರಗತಿಯಲ್ಲಿದೆ.<br>• 1437.10 ಲಕ್ಷ ರೂ. ವೆಚ್ಚದಲ್ಲಿ ಮೂಡಾ ನಿಧಿಯಿಂದ ನಿರ್ಮಿಸಲ್ಪಟ್ಟ ಉರ್ವ ಮಾರುಕಟ್ಟೆ ಸಂಕೀರ್ಣದ ಹರಾಜು ಪ್ರಕ್ರಿಯೆ ಪ್ರಗತಿಯಲ್ಲಿದೆ.<br>• 4150.00 ಲಕ್ಷ ರೂ. ವೆಚ್ಚದಲ್ಲಿ ಕಂಕನಾಡಿ ಮಾರುಕಟ್ಟೆಯ ನಿರ್ಮಾಣ ಪ್ರಗತಿಯಲ್ಲಿದೆ. |
| ಊ) | ಈ ಮಾರುಕಟ್ಟೆಗಳಲ್ಲಿ ಹರಾಜು ಮಾಡಿರುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಹರಾಜಿಗೆ ಬಾಕಿಯಿರುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು; ಹರಾಜು ನಿಯಮಗಳೇನು; ಎಷ್ಟು ಮಾರುಕಟ್ಟೆಗಳು ಪ್ರಸ್ತುತ ಖಾಲಿಯಿವೆ; ಖಾಲಿಯಿರಲು ಕಾರಣಗಳೇನು ? (ಸ್ಟಾಲು ಸಂಖ್ಯೆ ಸಹಿತ ವಿವರ ನೀಡುವುದು) | • 14 ಮಾರುಕಟ್ಟೆಗಳನ್ನು ಹರಾಜು ಮಾಡಲಾಗಿದೆ.<br>• ಕಾಟಿಪಳ್ಳ 6ನೇ ಬ್ಲಾಕ್ ಮಾರುಕಟ್ಟೆಯ 6 ಸ್ಟಾಲುಗಳು ಹರಾಜು ಪ್ರಗತಿಯಲ್ಲಿದೆ.<br>• ಮೊದಲ ಮಹಡಿ ಸ್ಟಾಲ್ ಸಂಖ್ಯೆ 1, 2, 3, 4, 6, 7, 8<br>• ಕದ್ರಿ ಮಾರುಕಟ್ಟೆಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>• ಉರ್ವ ಮಾರುಕಟ್ಟೆಯ ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.<br>• ಸರಕಾರದ ಸುತ್ತೋಲೆ ಸಂಖ್ಯೆ ನಅಇ 301/ಜಿಇಎಲ್ 2017, ದಿನಾಂಕ: 19-07-2019 ರಲ್ಲಿ ನೀಡಿರುವ ನಿರ್ದೇಶನಗಳನುಸಾರ ಹರಾಜು ನಡೆಸಲಾಗುತ್ತದೆ.<br>• ಬಿಡ್ದುದಾರರು ಬಾರದೇ ಇರುವ ಹಿನ್ನಲೆಯಲ್ಲಿ 25 ಮಳಿಗೆಗಳು ಖಾಲಿ ಇರುತ್ತವೆ.<br>(ಕಾಟಿಪಳ್ಳ ಮಾರುಕಟ್ಟೆ ಸ್ಟಾಲು ನಂಬ್ರ 1,2,3,4,6,7,8)<br>(ಬಿಜೈ ಮಾರುಕಟ್ಟೆ- UG-11, LG-12, LG-13, LG-14, LG-15, LG-16, LG-17, LG-18, FF-1, FF-2, FF-3, FF-4)<br>(ಕಾವೂರು ಮಾರುಕಟ್ಟೆ- UG-17,UG-18,FF-4,FF-5, FF-7,FF-10) |

**ನಅಇ 62 ಎಂಎಂಸಿ 2023 (ಇ)**

4/12/2023

**(ಬಿ.ಎಸ್. ಸುರೇಶ)**
ನಗರಾಭಿವೃದ್ಧಿ ಹಾಗೂ ನಗರ ಯೋಜನೆ
ಸಚಿವರು

# ಅನುಬಂಧ

| | | ಬೆಳಗಾವಿ | ಹುಬ್ಬಳ್ಳಿ-ಧಾರವಾಡ | ಶಿವಮೊಗ್ಗ | ತುಮಕೂರು | ಮೈಸೂರು | ದಾವಣಗೆರೆ | ಮಂಗಳೂರು | ವಿಜಯಪುರ | ಕಲಬುರಗಿ | ಬಳ್ಳಾರಿ |
|---|---|---|---|---|---|---|---|---|---|---|---|
| (ಅ) | ರಾಜ್ಯದಲ್ಲಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು? | 553 ಮಳಿಗೆಗಳು | 75 (1513 ಮಳಿಗೆಗಳು) | 3 | ಇಲ್ಲ | 15 (1941 ಮಳಿಗೆಗಳು) | 1 (254 ಮಳಿಗೆಗಳು) | 26 | 6 | 3 (720 ಮಳಿಗೆಗಳು) | 2 |
| | ಈ ಮಾರುಕಟ್ಟೆಗಳಲ್ಲಿ ಹರಾಜು ಮಡಿರುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು? | 214 ಮಳಿಗೆಗಳು | 75 (1513 ಮಳಿಗೆಗಳು) | - | ಇಲ್ಲ | 1854 ಮಳಿಗೆಗಳು | 254 ಮಳಿಗೆಗಳನ್ನು ಹರಾಜು ಮಾಡಲು ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಲಾಗಿದೆ | 14 | 5 | 691 | 1 |
| | ಹರಾಜಿಗೆ ಬಾಕಿ ಇರುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು? | 98 ಮಳಿಗೆಗಳು | 31.03.2018ಕ್ಕೆ ಲೀಜ್ ಅವಧಿ ಮುಗಿದಿದ್ದು ಇ-ಹರಾಜು ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. | - | ಇಲ್ಲ | 87 ಮಳಿಗೆಗಳು | 254 ಮಳಿಗೆಗಳು | 12 | 1 | 12 | 1 |
| | ಈ ಮಾರುಕಟ್ಟೆಗಳಿಂದ ಸರ್ಕಾರಕ್ಕೆ ಬರುತ್ತಿರುವ ಆದಾಯ ಎಷ್ಟು? ಎಲ್ಲಾ ವಿವರಗಳ ಸಹಿತ ಪಾಲಿಕೆವಾರು ಮಾಹಿತಿ ನೀಡುವುದು. | ರೂ.155.65 ಲಕ್ಷ | ರೂ.368.88 ಲಕ್ಷ | ರೂ.16.26 ಲಕ್ಷ | ಇಲ್ಲ | ರೂ.73.81 ಲಕ್ಷ | ಹರಾಜಿನ ನಂತರ ತಿಳಿದು ಬರುವುದು. | ರೂ.265.84 ಲಕ್ಷ | ರೂ.201.79 ಲಕ್ಷ | ರೂ.1.42 ಲಕ್ಷ | ವಿಲೇವಾರಿ ಮಾಡಲು ಜಿಲ್ಲಾಧಿಕಾರಿಗಳ ಹಂತದಲ್ಲಿ ಬಾಕಿ ಇರುತ್ತದೆ. |